ಶ್ರೀ ಜಗದೀಶ್ ಶೆಟ್ಟರ್ : ಅದಕ್ಕಾಗಿ ಮಾನ್ಯ ಸಿದ್ಧರಾಮಯ್ಯನವರು ಇದಕ್ಕೆ ಪ್ರತ್ಯೇಕವಾಗಿ ಹಣವನ್ನು ನಿಗದಿ ಮಾಡಬೇಕು. ನೀರಾವರಿ ನಿಗಮದಲ್ಲಿ ಹಣ ಇದೆ, ಅದರಲ್ಲಿ ನಾವು ಖರ್ಚು ಮಾಡುತ್ತೇವೆ ಎನ್ನುವುದು ಬೇರೆ. ಆದರೆ ಇದಕ್ಕೆ ಪ್ರತ್ಯೇಕವಾಗಿ ಹಣವನ್ನು ನಿಗದಿ ಮಾಡಬೇಕೆನ್ನುವ ಒತ್ತಾಯವನ್ನು ನಾನು ಮಾಡುತ್ತಿದ್ದೇನೆ.

3. ಅಧ್ಯಕ್ಷರ ಅಪ್ಪಣೆ ಮೇರೆಗೆ ಸದನದಲ್ಲಿ ಮೊಬೈಲ್ ಫೋನ್ ತೆಗೆದುಕೊಂಡು ಬಂದಿರುವ ಬಗ್ಗೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೇ, ಯಾರೋ ಮೊಬೈಲ್ ಫೋನನ್ನು ತೆಗೆದುಕೊಂಡು ಹೌಸ್ ಒಳಗೆ ಬರುತ್ತಾರೆ. I think ನೀವು ಬಹಳ strict ಆಗಬೇಕಾಗುತ್ತದೆ. You will have to suspend the Member. What they have converted this House into? Is this a club?

ಅಧ್ಯಕ್ಷರು : ನಾನು ವಿನಂತಿಯನ್ನು ಮಾಡಿದೆ.

Sri K.R. Ramesh Kumar : Who ever is the Member let him be suspended.

ಶ್ರೀ ಅರಗ ಜ್ಞಾನೇಂದ್ರ : ಒಂದು ಮೆಷಿನ್ ಬರುತ್ತದೆ ಸಾರ್, ಒಳಗಡೆ ಬಂದ ಕೂಡಲೇ ಜಾಮ್ ಆಗಿಬಿಡುತ್ತದೆ. ಈ ವ್ಯವಸ್ಥೆ ಲೋಕಸಭೆಯಲ್ಲಿ ಇದೆ.

Sri K.R. Ramesh Kumar : They can't take the House so lightly I say.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ಒಳಗೆ ಬಂದು ಮಾತನಾಡುತ್ತಾರೆ. ಈ ರೀತಿಯಾದರೆ ಸಭೆಗಳಿಗೆ ಗೌರವ ಘನತೆಯೇನಾದರೂ ಉಳಿಯುತ್ತದೆಯೇ?

4. ಅಧ್ಯಕ್ಷರ ತೀರ್ಪು

ಅಧ್ಯಕ್ಷರು : ಆ ಜಾಮ್ ಆಗುವ ಯಂತ್ರವನ್ನು ಹಾಕೋಣ ಅದನ್ನು ಮಾಡಿಸುತ್ತೇನೆ. ಮುಂದಿನ ಅಧಿವೇಶನದಲ್ಲಿ ಅದನ್ನು ಮಾಡಬೇಕಾಗುತ್ತದೆ. ಏಕೆಂದರೆ ಇಲ್ಲಿ ಎಷ್ಟೇ ವಿನಂತಿ ಮಾಡಿದರೂ ಶಾಸನ ಮಾಡುತ್ತಿರುವ ಶಾಸಕರುಗಳೇ ನಿರ್ದೇಶನ ಕೊಟ್ಟರೂ ಫಾಲೋ ಮಾಡುತ್ತಿಲ್ಲ. ಆ ಕಾರಣದಿಂದ ಆ ಯಂತ್ರದ ವ್ಯವಸ್ಥೆಯನ್ನು ಮುಂದಿನ ಸಾರಿ ಮಾಡೋಣ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೇ, ಯಾರಿಗೆ ಗೌರವದ ಮಾತು ಅರ್ಥವಾಗುವುದಿಲ್ಲ. ಅವರಿಗೆ ನೀವು ನಿಮ್ಮ ಅಧಿಕಾರವನ್ನು ಉಪಯೋಗಿಸಿ ಶಿಕ್ಷೆಯನ್ನು ಕೊಡಬೇಕಾಗುತ್ತದೆ. ನಿಮ್ಮ ಭಾಷೆ ಅರ್ಥವಾಗುವುದಿಲ್ಲ. ಅರ್ಥವಾಗುವ ಭಾಷೆಯನ್ನು ಬಳಸುತ್ತೇನೆ ಎಂದು ಹೇಳಿ ತಾವು ಅಧಿಕಾರವನ್ನು ಚಲಾಯಿಸಬೇಕಾಗುತ್ತದೆ. ಇಲ್ಲದೆ ಹೋದರೆ ಈ ಸದನದ ಘನತೆ ಹಾಳಾಗಿ ಹೋಗುತ್ತದೆ. ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, please assert your authority.

ಶ್ರೀ ಅರಗ ಜ್ಞಾನೇಂದ್ರ : ಆ ಯಂತ್ರವನ್ನು ಹಾಕಿ ಸಾರ್.

ಅಧ್ಯಕ್ಷರು : ಆಯಿತು. ದಯಮಾಡಿ ಎಲ್ಲಾ ಸದಸ್ಯರೂ ಅರ್ಥ ಮಾಡಿಕೊಳ್ಳಬೇಕಾಗಿದೆ. ಹಿರಿಯ ಸದಸ್ಯರಾದ ಮಾನ್ಯ ರಮೇಶ್‌ಕುಮಾರ್‌ರವರು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ, ಎಲ್ಲರೂ ಸಹಕರಿಸಬೇಕೆಂದು ನಾನು ಪ್ರಾರ್ಥನೆಯನ್ನು ಮಡುತ್ತೇನೆ.

5. ವಿತ್ತೀಯ ಕಾರ್ಯಕಲಾಪಗಳು

2004-05ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆ

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ಇನ್ನೊಂದು ಎರಡು-ಮೂರು ವಿಷಯಗಳನ್ನು ಹೇಳಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ. ನಾನು ಇನ್ನೊಂದು ವಿಷಯವನ್ನು ಹೇಳುವಂಥದ್ದು ಇವತ್ತು ಕೆಲವೊಂದು ರೈಲ್ವೆ ಯೋಜನೆಗಳ ಬಗ್ಗೆ "ಕೇರಾಯ್ಡ್" ಎಂದು ಹೇಳಿ ರಾಜ್ಯ ಸರ್ಕಾರವೂ ಹಣವನ್ನು ಕಾಂಟ್ರಿಬ್ಯೂಷನ್ ಮಾಡುವಂಥ ಕೆಲವೊಂದು ಯೋಜನೆಗಳನ್ನು ಹಿಂದಿನ ಸರ್ಕಾರ ಮಾಡಿತ್ತು. 'ಕರ್ನಾಟಕ ರೈಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಎಂಟರ್‌ಪ್ರೈಸಸ್' ಎಂದು ಹೇಳಿ ಸ್ಥಾಪನೆ: ಸರ್ಕಾರ ಮಾಡಿತ್ತು. ಅದರ ಮುಖಾಂತರ 4 ಯೋಜನೆಗಳನ್ನು ತೆಗೆದುಕೊಳ್ಳುವಂತಹ ಪ್ರಸ್ತಾವನೆ ಇತ್ತು. ಹಾಸನ-ಮಂಗಳೂರು ಗೇಟ್ ಕನ್ವರ್ಷನ್, ಹುಬ್ಬಳ್ಳಿ-ಅಂಕೋಲಾ ರೈಲ್ವೆ ಮಾರ್ಗ, ಮತ್ತು ಬಿಜಾಪುರ್-ಗದಗ್ ಗೇಜ್ ಕನ್ವರ್ಷನ್ ಗುಂತಕಲ್-ಹೊಸಪೇಟೆ ಜೋಡಿ ಮಾರ್ಗ. ಈ ನಾಲ್ಕು ಯೋಜನೆಗಳನ್ನು ತೆಗೆದುಕೊಳ್ಳುವಂತಹದು. ಆದರೆ ಇವತ್ತು ಏನಾಗಿದೆ ಎಂದರೆ ಈ ಹಾಸನ-ಮಂಗಳೂರು ಗೇಜ್ ಕನ್ವರ್ಷನ್ ಇದೆ ಅದಕ್ಕಾಗಿ ರಾಜ್ಯ ಸರ್ಕಾರ ಹಣ ಕೊಟ್ಟಿತು. ಆದರೆ ಈ ಒಂದು ಬಿಜಾಪುರ್-ಗದಗ್ ಗೇಜ್ ಕನ್ವರ್ಷನ್‌ಗೆ 300 ಕೋಟಿ ರೂಪಾಯಿ ಬೇಕಾಗುತ್ತದೆ, 200 ಕಿಲೋ ಮೀಟರ್‌ಗೆ. ಈಗಾಗಲೇ ಕೇಂದ್ರ ಸರ್ಕಾರ 196 ಕೋಟಿ ರೂ. ಹಣವನ್ನು ಕೊಟ್ಟಿದೆ. ಹಣ ವಿನಿಯೋಗಿಸಿದೆ, ಕೆಲಸ ನಡೆಯುತ್ತಿದೆ. ಮತ್ತು ರಾಜ್ಯ ಸರ್ಕಾರದ ಕಾಂಟ್ರಿಬ್ಯೂಷನ್ 74 ಕೋಟಿ 49 ಲಕ್ಷ ರೂಪಾಯಿ. ಆದರೆ ರಾಜ್ಯ ಸರ್ಕಾರ ಇದಕ್ಕೆ ಒಂದು ಪೈಸೆ ಹಣ ಕೊಡಲಿಲ್ಲ. ಬಿಜಾಪುರ್-ಗದಗ್ ಗೇಜ್ ಕನ್ವರ್ಷನ್‌ಗೆ. "ಕೆ-ರೈಡ್" ಮುಖಾಂತರ. ಹೀಗಾಗಿ ಕಾಮಗಾರಿಗಳು ಬಹಳ ಸ್ಥಗಿತವಾಗಿದ, ಸ್ಲೋ ಆಗಿ ಹೋಗುತ್ತಿದೆ. ಇನ್ನೊಂದು ಹುಬ್ಬಳ್ಳಿ-ಅಂಕೋಲಾ ಇದು 165 ಕಿಲೋ ಮೀಟರ್. ಇದಕ್ಕಾಗಿ 997 ಕೋಟಿ ರೂಪಾಯಿ ಪ್ರಾಜೆಕ್ಟ್ ಇದೆ. ಆದರಲ್ಲಿ ಇವತ್ತು ಕೇಂದ್ರ ಸರ್ಕಾರದ ವಿವಿಧ ಇಲಾಖೆ 49 ಕೋಟಿ ರೂಪಾಯಿ ಹಣವನ್ನು ಈಗಾಗಲೇ ಖರ್ಚು ಮಾಡುತ್ತಿದ್ದಾರೆ. ಆದರೆ ಈಗ ರಾಜ್ಯ ಸರ್ಕಾರದವರು ಇದುವರೆಗೆ ಒಂದು ಪೈಸೆ ಕಾಂಟ್ರಿಬ್ಯೂಷನ್ ಮಾಡಲಿಲ್ಲ. ಅದೇ ರೀತಿ ಇನ್ನೊಂದು ಯೋಜನೆಗೂ ಹಣಕೊಡುತ್ತಿಲ್ಲ. ಹೀಗಾಗಿ ಕೇವಲ ಹಾಸನ-ಮಂಗಳೂರಿಗೆ "ಕೆ-ರೈಡ್"ನಿಂದ ಹಣ ಬಂದರೆ ಉಳಿದ ಯಾವುದೇ ಪ್ರಾಜೆಕ್ಟ್‌ಗೆ ಹಣ ಬರಲಿಲ್ಲ. ಹೀಗಾಗಿ ಆ ದೃಷ್ಟಿಯಿಂದಲೂ ಆ ಭಾಗದಲ್ಲಿ ಅನ್ಯಾಯ ಆಗುತ್ತಿರುವುದನ್ನು ಇವತ್ತು ನಾವು ನೋಡುತ್ತಿದ್ದೇವೆ. ಇದರ ಬಗ್ಗೆ ರಾಜ್ಯ ಸರ್ಕಾರದ ನಿಲುವು ಏನು? ಏಕೆಂದರೆ ಸರ್ಕಾರ ಬದಲಿ ಆಯಿತು. ಅದೇ ಹಿಂದಿನ ಸರ್ಕಾರದ ಪಾಲಿಸಿಯನ್ನು ಮಾನ್ಯ ಸಿದ್ಧರಾಮಯ್ಯನವರು ಮುಂದುವರಿಸುತ್ತಾರೋ ಇಲ್ಲ "ಕೆ-ರೈಡ್" ಅನ್ನು ವಿಸರ್ಜನೆ ಮಾಡುತ್ತಾರೋ ಎನ್ನುವ ಬಗ್ಗೆ ಸರ್ಕಾರ ಸ್ಪಷ್ಟೀಕರಣ ಮಾಡಬೇಕು. "ಕೆ-ರೈಡ್" ಅಂದರೆ "ಕರ್ನಾಟಕ ರೇಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಎಂಟರ್‌ಪ್ರೈಸಸ್" ರೈಲ್ವೆ ಯೋಜನೆ ಏನು ಇದ್ದಾವೆ, ಅದಕ್ಕೆ ರಾಜ್ಯ ಸರ್ಕಾರ 26 ಪರ್ಸೆಂಟ್ ಕಾಂಟ್ರಿಬ್ಯೂಷನ್ ಕೊಡಬೇಕು. ಕೇಂದ್ರ ಸರ್ಕಾರ 26 ಪರ್ಸೆಂಟ್, 48 ಪರ್ಸೆಂಟ್ ಬೇರೆ